ಶ್ರೀ ಜಿ. ದುಗ್ಗಪ್ಪ.—ಜಿಲ್ಲಾ ವಿದ್ಯಾಧಿಕಾರಿಗಳ ಅಭಿಪ್ರಾಯ ಪಡೆಯಲಾಯಿತೆ ?

ಶ್ರೀ ಎ. ಜಿ. ರಾಮಚಂದ್ರರಾವ್.—ಸ್ಪೆಸಿಫಿಕ್ಕಾಗಿ ಅವರನ್ನು ಕೇಳಿರುವುದು ಗೊತ್ತಿಲ್ಲ. ಮಂತ್ರಿಗಳು, ಮುನಿಸಿಪಲ್ ಕೌನ್ಸಿಲರ್ಸ್, ಇಂಜನಿಯರಿಂಗ್ ಇಲಾಖಾ ಮುಖ್ಯಾಧಿಕಾರಿಗಳು ಇವರೆಲ್ಲಾ ಇದ್ದು ಸ್ಕೆಟನ್ನು ಸೆಲೆಕ್ಟ್‌ಮಾಡಿದರು. ಅದನ್ನು ನಾವೂ ಒಪ್ಪಿದ್ದೇವೆ.

ಶ್ರೀ ಎಸ್. ಗೋಪಾಲಗೌಡ.—ಸ್ವಾಮಿ, ಹರಿಜನರು, ಬ್ರಾಹ್ಮಣರು, ಲಿಂಗಾಯಿತರು, ಒಕ್ಕಲಿಗರು, ಕುರುಬರು, ಮುಸಲ್ಮಾನರು ಇವರಿಗೆಲ್ಲಾ ಬೇರೆ ಬೇರೆ ವಿದ್ಯಾರ್ಥಿ ನಿಲಯವನ್ನು ಕಟ್ಟಲು ಸರ್ಕಾರದವರು ಗ್ರಾಂಟನ್ನು ಕೊಡುತ್ತಿರುವುದರಿಂದ ಜಾತಿ ಮತ ಹಾಗೆಯೇ ಉಳಿಯುವುದಕ್ಕೆ ಸಹಾಯ ಮಾಡಿದ ಹಾಗಾಗುವುದಿಲ್ಲವೆ ?

ಶ್ರೀ ಎ. ಜಿ. ರಾಮಚಂದ್ರರಾವ್.—ಅದು ತಮ್ಮ ಅಭಿಪ್ರಾಯ.

ಶ್ರೀ ಎಸ್. ಗೋಪಾಲಗೌಡ.—ಈ ವಿಷಯವನ್ನು ಸರ್ಕಾರದವರು ಪರ್ಯಾಲೋಚನೆ ಮಾಡುವರೆ ?

ಶ್ರೀ ಎ. ಜಿ. ರಾಮಚಂದ್ರರಾವ್.—ಮಾಡುತ್ತಿದ್ದಾರೆ.

ಶ್ರೀ ಟಿ. ಹನುಮಯ್ಯ.—ಈ ಹಾಸ್ಟಲಿನ ಫೌಂಡೇಷನ್ ಬಿದ್ದಿದೆಯೆ ?

ಶ್ರೀ ಎ. ಜಿ. ರಾಮಚಂದ್ರರಾವ್.—ನೋಟೀಸ್.

ಶ್ರೀ ಟಿ. ಹನುಮಯ್ಯ.—ಈಗ ಹಾಸ್ಟೆಲ್ ಕೆಲಸ ನಡೆಯುತ್ತಿಲ್ಲವೆ ?

Mr. SPEAKER.—You must thank the Government for having sanctioned one lakh and eighty thousand rupees.

ಶ್ರೀ ಪಿ. ಆರ್. ರಾಮಯ್ಯ.—Casteless and non-communal hostels ಇರಬೇಕೆಂದೇನಾದರೂ ರಾಜ್ಯಾಂಗದಲ್ಲಿ ಹೇಳಿದೆಯೇ ?

ಶ್ರೀ ಎ. ಜಿ. ರಾಮಚಂದ್ರರಾವ್.—ರಾಜ್ಯಾಂಗದಲ್ಲಿ ಹಾಸ್ಟೆಲುಗಳ ವಿಷಯದಲ್ಲಿ ವಿಧಿಯಿರುವುದು ನನ್ನ ಗಮನಕ್ಕೆ ಬಂದಿಲ್ಲ.

ಶ್ರೀ ಪಿ. ಆರ್. ರಾಮಯ್ಯ.—ಮೈಸೂರು ಸರ್ಕಾರದವರು ರಾಜ್ಯಾಂಗದ ವಿಧಿಗನುಸಾರವಾಗಿ ಈ casteless ಮತ್ತು non-communal ಹಾಸ್ಟೆಲುಗಳನ್ನು ಸ್ಥಾಪಿಸಲು ಸರಿಯಾದ ಒಂದು ಕಾರ್ಯಕ್ರಮ ಕೈಗೊಳ್ಳುವರೆ ?

ಶ್ರೀ ಎ. ಜಿ. ರಾಮಚಂದ್ರರಾವ್.—ಅದು ಪರಿಶೀಲನೆಯಲ್ಲಿದೆಯೆಂದು ಹೇಳಿದ್ದೇನೆ.

ಶ್ರೀ ಬಿ. ವಿ. ನಾರಾಯಣರೆಡ್ಡಿ.—ಈಗ ಸ್ಥಾಪಿಸಿರುವ ಹಾಸ್ಟಲೊಂದನ್ನು ಬಿಟ್ಟು ಬಾಕಿಯಾದುವನ್ನು ಹಿಂದುಳಿದ ಪಂಗಡದವರ ಹಾಸ್ಟೆಲೆಂದು ಮಾಡಲು ಸಾಧ್ಯವೆ ?

ಶ್ರೀ ಎ. ಜಿ. ರಾಮಚಂದ್ರರಾವ್.—ಇಲ್ಲ.

ಶ್ರೀ ಬಿ. ವಿ. ನಾರಾಯಣರೆಡ್ಡಿ.—ಅದಕ್ಕೆ ಕಾರಣ ವೇನು ?

ಶ್ರೀ ಎ. ಜಿ. ರಾಮಚಂದ್ರರಾವ್.—ಡಿಪ್ರೆಸ್ಡ್ ಕ್ಲಾಸ್‌ಗೆ ಸ್ಪೆಷಲ್ ಪ್ರಿವಿಲೇಜ್ ಇದೆ.

ಶ್ರೀ ಬಿ. ವಿ. ನಾರಾಯಣರೆಡ್ಡಿ.—ಇದನ್ನು ಡಿಪ್ರೆಸ್ಡ್ ಕ್ಲಾಸ್ ಹಾಸ್ಟಲೆಂದು ಹೇಳುತ್ತೀರೋ ಅಥವಾ ಹರಿಜನರ ಹಾಸ್ಟೆಲೆಂದು ಹೇಳುತ್ತೀರೋ ?

ಶ್ರೀ ಎ. ಜಿ. ರಾಮಚಂದ್ರರಾವ್.—ಡಿಪ್ರೆಸ್ಡ್ ಕ್ಲಾಸ್ ಹಾಸ್ಟೆಲ್ ಎಂದು ಹೇಳಲಾಗುತ್ತದೆ.

ಶ್ರೀ ಬಿ. ರಾಚಯ್ಯ.—ಈಗ ಮಾಡುತ್ತಿರುವುದು ಕೋಲಾರದ ಟೌನಿನ ಹಾಸ್ಟೆಲ್ ಅಲ್ಲವೆ ?

ಶ್ರೀ ಎ. ಜಿ. ರಾಮಚಂದ್ರರಾವ್.—ಹೌದು.

ಶ್ರೀ ಬಿ. ರಾಚಯ್ಯ.—ಕೋಲಾರ ಟೌನಿನಲ್ಲಿ ಹಾಸ್ಟೆಲಿಗೆ ಬರುವವರ ವಿದ್ಯಾರ್ಥಿಗಳ ಸಂಖ್ಯೆ ಹೆಚ್ಚಾಗಿರುವುದರಿಂದ ಅಲ್ಲವೆ ಅಲ್ಲಿ ಸ್ಥಾಪನೆ ಮಾಡುವುದು ?

ಶ್ರೀ ಎ. ಜಿ. ರಾಮಚಂದ್ರರಾವ್.—ಹೌದು. ಅದು ಡಿಸ್ಟ್ರಿಕ್ಟ್ ಹೆಡ್‌ಕ್ವಾರ್ಟರು ಮತ್ತು ಕಾಲೇಜು ಇರುವ ಸ್ಥಳವಾಗಿರುವುದರಿಂದ ಹೆಚ್ಚು ವಿದ್ಯಾರ್ಥಿಗಳು ಬರುವ ಜಾಗವಾಗಿ ಅವರಿಗೆ ಅವಕಾಶ ಒದಗುವುದಾಗಿದೆ.

ಶ್ರೀ ಜಿ. ಎ. ತಿಮ್ಮಪ್ಪಗೌಡ.—ಸರ್ಕಾರದವರು ಸಹಾಯ ನೀಡುವ ಕೋಮುವಾರು ಹಾಸ್ಟೆಲುಗಳಲ್ಲಿ ಕೊನೆಯಪಕ್ಷ ಶೇಕಡ 25 ವಿದ್ಯಾರ್ಥಿಗಳಾದರೂ ಇರಬೇಕು, ಹಾಗಿದ್ದರೆ ಸ್ಥಾಪಿಸಬೇಕು ಎಂದು ಆರ್ಡರಿದೆಯ ?

ಶ್ರೀ ಎ. ಜಿ. ರಾಮಚಂದ್ರರಾವ್.—ಆ ರೀತಿಯ ನಲಹೆಯಿದೆ.

Grades of Headmasters in Municipal High Schools.

Q.—532. **Srimathi LAKSHMIDEVI RAMANNA** (Hoskote—Anekal).—

Will the Government be pleased to state :—

(*a*) the number of Headmasters working in the Municipal High Schools in the State ;

(*b*) of them how many are getting junior grades of pay ;

(*c*) the basis on which junior and senior grades of pay have been fixed for these Headmasters ?

A.—**Sri A. G. RAMACHANDRA RAO** (Minister for Law and Education).—

(*a*) 62 excluding those in Bellary and one Corporation School, Blackpalli, and the Girls' High School, Gandhinagar.

(*b*) 52.

(*c*) Based on service and seniority.

ಶ್ರೀಮತಿ ಲಕ್ಷ್ಮೀದೇವಿರಾಮಣ್ಣ.—ಮುನಿಸಿಪಲ್ ಹೈಸ್ಕೂಲುಗಳ ಮುಖ್ಯೋಪಾಧ್ಯಾಯರುಗಳಿಗೆ ಜೂನಿಯರ್ ಗ್ರೇಡ್ ಸಂಬಳ ಮತ್ತು ಸೀನಿಯರ್ ಗ್ರೇಡ್ ಸಂಬಳವೆಷ್ಟು ?

ಶ್ರೀ ಎ. ಜಿ. ರಾಮಚಂದ್ರರಾವ್.—ಜೂನಿಯರ್ ಗ್ರೇಡ್ 130—10—200 ರೂಪಾಯಿಗಳು, ಸೀನಿಯರ್ ಗ್ರೇಡ್ 170—10—250 ರೂಪಾಯಿಗಳು.

ಶ್ರೀಮತಿ ಲಕ್ಷ್ಮೀದೇವಿರಾಮಣ್ಣ.—ಜೂನಿಯರ್ ಗ್ರೇಡಿನವರು ಮ್ಯಾಕ್ಸಿಮಂ ರೀಚ್ ಆದಮೇಲೆ ಅದೇ ಸಂಬಳದಲ್ಲೇ ಕೊಳೆಯಬೇಕಲ್ಲವೆ ?

ಶ್ರೀ ಎ. ಜಿ. ರಾಮಚಂದ್ರರಾವ್.—ಅದು ಅನಾವಶ್ಯಕವೆಂದು ಕಾಣುತ್ತದೆ.

ಶ್ರೀಮತಿ ಲಕ್ಷ್ಮೀದೇವಿರಾಮಣ್ಣ.—ಉತ್ತರದಲ್ಲಿ ಕೊಟ್ಟಿರುವ ಅಂಕಿ ಅಂಶಗಳ ಪ್ರಕಾರ ಹತ್ತು ಸೀನಿಯರ್ ಗ್ರೇಡಿನ ಸ್ಥಾನಗಳಿವೆ. 52 ಮಂದಿ ಜೂನಿಯರ್ ಗ್ರೇಡಿನಲ್ಲಿದ್ದಾರೆ. ಅವರಿಗೆ ಸೀನಿಯಾರಿಟಿ ಪ್ರಕಾರ ಹೆಚ್ಚಿನ ಗ್ರೇಡು ಸಿಕ್ಕದೆ ಹಾಗೆಯೇ ಇರಬಹುದು. ಸ್ಥಾನಗಳು ಹೆಚ್ಚಾಗಿಲ್ಲ. ಆದ್ದರಿಂದ ರನಿಂಗ್ ಗ್ರೇಡಿದ್ದರೆ ಒಳ್ಳೆಯದಲ್ಲವೆ ?

ಶ್ರೀ ಎ. ಜಿ. ರಾಮಚಂದ್ರರಾವ್.—ಹೇಗೆ ಮಾಡಿದರೂ ಆಗುತ್ತದೆ. ಈಗಿರುವ ನಿಯಮದ ಪ್ರಕಾರ ನಿಧಾನವಾಗಿ ಹೆಚ್ಚಿನ ಗ್ರೇಡಿಗೆ ಬರುತ್ತಾರೆ.

ಶ್ರೀಮತಿ ಲಕ್ಷ್ಮೀದೇವಿರಾಮಣ್ಣ.—ಈ 52 ಮಂದಿಗಳಲ್ಲಿ ಈಗಾಗಲೇ ಮ್ಯಾಗ್ಜಿಮಂ ರೀಚ್ ಆಗಿರುವವರೆಷ್ಟುಮಂದಿ ಇದ್ದಾರೆ ?

ಶ್ರೀ ಎ. ಜಿ. ರಾಮಚಂದ್ರರಾವ್.—ನೋಟೀಸ್.

ಶ್ರೀ ಜೆ. ಮಹಮ್ಮದ್ ಇಮಾಂ.—ನರ್ಕಾರಿ ಹೈಸ್ಕೂಲುಗಳಲ್ಲಿರುವ ಉಪಾಧ್ಯಾಯರಿಗೂ ಮುನಿಸಿಪಲ್ ಹೈಸ್ಕೂಲುಗಳಲ್ಲಿರುವ ಉಪಾಧ್ಯಾಯರಿಗೂ ಗ್ರೇಡಿನಲ್ಲಿ ಬಹಳ ಭೇದವಿದೆಯಲ್ಲವೆ ?

ಶ್ರೀ ಎ. ಜಿ. ರಾಮಚಂದ್ರರಾವ್.—ಬಹಳ ಭೇದವಿಲ್ಲವೆಂದು ಕಾಣುತ್ತದೆ.

ಶ್ರೀ ಜೆ. ಮಹಮ್ಮದ್ ಇಮಾಂ.—ಮುನಿಸಿಪಲ್ ಹೈಸ್ಕೂಲು ಮತ್ತು ನರ್ಕಾರಿ ಹೈಸೂಲು ಉಪಾಧ್ಯಾಯರಿಗೆ ಒಂದೇ ಗ್ರೇಡು ಕೊಡುವುದು ನ್ಯಾಯವಾದುದಲ್ಲವೆ ?

ಶ್ರೀ ಎ. ಜಿ. ರಾಮಚಂದ್ರರಾವ್.—ವಿದ್ಯಾ ನುಧಾರಣಾ ನಮಿತಿ ಅದನ್ನು ಶಿಫಾರ್ನು ಮಾಡಿದೆ. ಆದರೆ ಖರ್ಚು ನ್ವಲ್ಪ ಜಾಸ್ತಿಯಾಗುವುದರಿಂದ ಅದನ್ನು ಪರ್ಯಾಲೋಚಿನುತ್ತೇವೆ.

ಶ್ರೀ ಜೆ. ಮಹಮ್ಮದ್ ಇಮಾಂ.—ಖರ್ಚು ಜಾಸ್ತಿಯಾದರೂ ಪರವಾಯಿಲ್ಲ ; ಈಗಿನ ನಂದರ್ಭದಲ್ಲಿ ಅವರಿಗೆ ತೃಪ್ತಿಯನ್ನುಂಟುಮಾಡುವುದಕ್ಕಾಗಿ ಅವರುಗಳಿಗೆರ್ಲಾ ಈರೀತಿ uniform ಆಗಿ ಕೊಡುವುದು ಸೂಕ್ತವಲ್ಲವೆ ?

ಶ್ರೀ ಎ. ಜಿ. ರಾಮಚಂದ್ರರಾವ್.—ಅದಕ್ಕೆ ನ್ಥಳೀಯ ನಂಸ್ಥೆಗಳು ಕೂಡ ಒಪ್ಪಬೇಕಾಗುತ್ತದೆ.

ಶ್ರೀಮತಿ ಬಳ್ಳಾರಿ ಸಿದ್ದಮ್ಮ.—ಈ ಪ್ರಶ್ನೆಗೆ ಉತ್ತರ ಕೊಟ್ಟಿರುವುದರಲ್ಲಿ ಬಳ್ಳಾರಿಯಲ್ಲಿರುವ ಸ್ಕೂಲುಗಳನ್ನೇಕೆ ಸೇರಿಸಿಲ್ಲ?

ಅಧ್ಯಕ್ಷರು.—ಮುಂದಿನ ಪ್ರಶ್ನೆಯಲ್ಲಿ ಅದಕ್ಕೆ ಉತ್ತರ ಹೇಳಿದೆ.

Introduction of Kannada Medium in Schools and starting Engineering College in Bellary.

Q.—540. **Sri S. GOPALA GOWDA** (Sagar—Hosanagar).—

Will the Government be pleased to state :—

whether it is a fact that consequent on the union of Bellary with Mysore, the Government have been contemplating to consider the following in order to implement them : -

(*a*) to make Kannada the medium of instruction once for all in all schools ;

(*b*) to start an Engineering College either in Hospet or Bellary ?

A.—**Sri A. G. RAMACHANDRA RAO** (Minister for Law and Education) :—

(*a*) Government have ordered that the system of education in force in Bellary District may remain as it is till the new system of Education under consideration of Government is introduced throughout the State.

(*b*) No.

ಶ್ರೀ ಎನ್. ಗೋಪಾಲಗೌಡ.—ಬಳ್ಳಾರಿಯಲ್ಲಿ ಯಾವ ವಿದ್ಯಾಭ್ಯಾನ ಪದ್ಧತಿ ಇದೆ ?

ಶ್ರೀ ಎ. ಜಿ. ರಾಮಚಂದ್ರರಾವ್.—ಇಂಟಗ್ರೇಷನ್ನಿಗೆ ಮೊದಲು ಮದ್ರಾಸಿನಲ್ಲಿ ಯಾವ ಪದ್ಧತಿ ವಿದ್ಯಾಭ್ಯಾನ ನಡೆಯುತ್ತಿತ್ತೋ ಅದೇ ನಡೆದುಕೊಂಡು ಹೋಗುತ್ತಿದೆ.

ಶ್ರೀ ಎನ್. ಗೋಪಾಲಗೌಡ.—ಮದ್ರಾಸಿನಲ್ಲಿ ನಡೆಯುತ್ತಿದ್ದ ಪದ್ಧತಿ ಎಂದರೆ ಯಾವ ಭಾಷೆಯಲ್ಲಿ ಪಾಠ ನಡೆಯುತ್ತಿತ್ತು ?

ಶ್ರೀ ಎ. ಜಿ. ರಾಮಚಂದ್ರರಾವ್.—ಕೆಲವು ಸ್ಕೂಲುಗಳಲ್ಲಿ ಕನ್ನಡವಿದೆ, ಇನ್ನು ಕೆಲವು ಸ್ಕೂಲುಗಳಲ್ಲಿ ತೆಲಗು ಇದೆ.

ಶ್ರೀ ಎನ್. ಗೋಪಾಲಗೌಡ.—ಬಳ್ಳಾರಿಯು ಮೈನೂರಿಗೆ ಸೇರಿದ ಮೇಲೆ ವಿದ್ಯಾಭ್ಯಾನದ ಬಗ್ಗೆ ತಾವು ಬಳ್ಳಾರಿಗೆ ಏನಾದರೂ ಹಣ ನಹಾಯಮಾಡಿದ್ದೀರಾ ?

ಶ್ರೀ ಎ. ಜಿ. ರಾಮಚಂದ್ರರಾವ್.—ಈಗ ಮೈನೂರು ನರ್ಕಾರದಿಂದಲೇ ಅದನ್ನು ನಡೆಸಿಕೊಂಡು ಬರುತ್ತಿದೆ.

ಶ್ರೀ ಎನ್. ಗೋಪಾಲಗೌಡ.—ಗ್ರಾಂಟ್ ಮುಂತಾದುವುಗಳಲ್ಲಿ ?

ಶ್ರೀ ಎ. ಜಿ. ರಾಮಚಂದ್ರರಾವ್.—ಮೊದಲು ಏನಿತ್ತೋ ಅದನ್ನು ಬದಲಾವಣೆ ಮಾಡದೆ ಅದನ್ನೇ ನಡೆಸಿಕೊಂಡು ಬರುತ್ತಿದೆ. ಇನ್ನು ಮೇಲೆ ಅದನ್ನು ಯಾವ ರೀತಿ integrate ಮಾಡಬೇಕೆಂಬುದನ್ನು ಯೋಚನೆಮಾಡಬೇಕು.

ಶ್ರೀ ಎನ್. ಗೋಪಾಲಗೌಡ.—ಅಲ್ಲಿ ಹೊನದಾಗಿ ಇಂಜನಿಯರಿಂಗ್ ಕಾಲೇಜನ್ನಾಗಲಿ ಅಥವಾ ಬೇರೆ ಏನಾದರೂ ಟೆಕ್ನಿಕಲ್ ಕಾಲೇಜನ್ನಾಗಲಿ ತೆರೆಯಬೇಕೆಂದು ಮನವಿ ಬಂದಿದೆಯೇ ?

ಶ್ರೀ ಎ. ಜಿ. ರಾಮಚಂದ್ರರಾವ್.—ಮನವಿ ಬಂದಿದೆ.

ಶ್ರೀ ಎನ್. ಗೋಪಾಲಗೌಡ.—ಮೈನೂರಿನ ಇತರ ಭಾಗಗಳಿಗಿಂತ ಬಳ್ಳಾರಿ ಭಾಗದಲ್ಲಿ ಪ್ರಾಥಮಿಕ ವಿದ್ಯಾಭ್ಯಾನ ಹಿಂದೆ ಬಿದ್ದಿದೆಯಲ್ಲವೇ ?

ಶ್ರೀ ಎ. ಜಿ. ರಾಮಚಂದ್ರರಾವ್.—ಪರಿಶೀಲನೆ ಮಾಡಬೇಕು.

ಶ್ರೀ ಎನ್. ಗೋಪಾಲಗೌಡ.—ಅಲ್ಲಿ ಹೆಚ್ಚು ಹೆಚ್ಚಾಗಿ ಪ್ರಾಥಮಿಕ ಪಾಠಶಾಲೆಗಳನ್ನು ತೆರೆಯುವುದಕ್ಕೆ ಈ ನಾಲನಲ್ಲಾದರೂ ತಾವು ಪ್ರಯತ್ನಮಾಡುತ್ತೀರಾ ?